ಏನನ್ನುವುದು ಇದನ್ನು? ಪ್.. ಪ್ರ್... ಪ್ರೀತಿಯೇ?

'ಇಂದ್... ಹೇ ಇಂದ್... ನೆವರ್ ಎವರ್ ಫಾಲ್ ಇನ್ ಲವ್...' ಎಚ್ಚರಿಸುತ್ತಲೇ ಇದ್ದ.

ನಾನು ಮಾತ್ರ ಬಿದ್ದೆ. ಬೀಳುತ್ತಲೇ ಇದ್ದೆ. ಬಿದ್ದೇ ಹೋಗಿದ್ದೆ.

ಎಷ್ಟೇ ಒಲ್ಲೆಂದುಕೊಂಡರೂ ಮನಸ್ಸು ಕೇಳುತ್ತದೆಲ್ಲಿ? ತಾಳುತ್ತದೆಲ್ಲಿ? ಗಂಟೆಗೊಂದು ಸರ್ತಿ ಫೋನು ಮಾಡುವೆ... ಇಲ್ಲದ ವಿಷಯವಿಟ್ಟುಕೊಂಡು ಕಾಡುವೆ. ಉತ್ತರಿಸದಿದ್ದಲ್ಲಿ, ಅಕಸ್ಮಾತ್ ಮಾತಿಗೆ ಸಿಗದಿದ್ದಲ್ಲಿ ಈಗ ಕರೆದಾನೆಂದು ಆಗ ಮಾಡಿಯಾನೆಂದು ಕಾಯುವೆ. ಮೆಸೇಜು ಮಾಡುವೆ. ವಾಟ್ಸ್ಆ್ಯಪು ತೆರೆತೆರೆದು ಓದಿದ್ದಾನೋ ಇಲ್ಲವೋ... ಎಂದು ಗಳಿಗೆಗೊಮ್ಮೆ ಗಳಿಗೆಯೆಣಿಸುವೆ. ಯಾಕೆ? ಏನಾಗಿದೆ? ಹುಷಾರು ತಪ್ಪಿದೆಯೋ ಹೇಗೆ?... ಹೀಗೆ ನನ್ನಲ್ಲೆ ತನಿಖೆ. ಕಷ್ಟವಾಗುವುದು. ಬಹುಶಃ ಇವನಿಗೂ ಕಷ್ಟವೇ... ಕೆಲವೊಮ್ಮೆ ಮಾತು ದುಡುಕಿ ಸಲ್ಲದ್ದು ಹೇಳುವೆ. ಆಸಕ್ತಿ ತಗ್ಗಿತಾ ಎಂದು ಕುಹಕಿಸುವೆ.

'ಇಂದ್... ನೀನು ಮಿತಿ ತಪ್ಪುತ್ತಿದ್ದೀ... ವೃಥಾ ಪ್ರೀತಿಸಿದ್ದೀ...' ಎಂದೊಮ್ಮೆ ಬರೆದ.

'ಸ್ಸಾರೀ...' ಅಂತಂದೆ. 'ಕೋಪವೇ?'

'ಹೂಂ..' ಎಂದು ಹ್ಲೂಂಗುಟ್ಟಿ ಬರೆದ. 'ಯು ಆರ್ ಡಿಫಿಕಲ್ಟ್!'

ಆ ಮುಂದೆ ಕಳಿಸಿದ್ದಕ್ಕೆ ಉತ್ತರವಿಲ್ಲ. ದಿನಗಟ್ಟಲೆ ಬರೆಯಲಿಲ್ಲ. ಕಾದೇ ಕಾದೆ. ಕಾದು ಬೇಸತ್ತೆ.

'ಹೇಳಿದ್ದೆಯಲ್ಲ, ಕಾಮ ಮೈಯಿನದು ಮತ್ತು ಪ್ರೀತಿ ಮನಸ್ಸಿನದು...' ಎಂದು ಕಡೆಯಲ್ಲೊಂದು ಸಾಲು ವಾಟ್ಸ್ಆ್ಯಪು ಮಾಡಿದೆ. ಎರಡು ನೀಲಿ 'ಟಿಕ್ಕು'ಗಳು ತೋರಿ ನೋಡಿದನೆಂದು ಗೊತ್ತಾಯಿತು. ಉತ್ತರಿಸಲಿಲ್ಲ. ಸುಮಾರು ಕಾದು, 'ಮುನಿಸಿಗೂ ಮನಸಿಗೂ ತಾಳೆಯಿದ್ದೀತು... ನಿನ್ನ ಈ ಪರಿ ಕೋಪಕ್ಕೂ ನಿನಗಾಗಿ ಹಾತೊರೆಯುವ ಈ ಮೈಗೂ ತಾಳೆಯಿದೆಯೆ?' ಅಂತಿನ್ನೊಂದು ಕಳಿಸಿದೆ.

ಕರಿಯ 'ಟಿಕ್ಕು'ಗಳು ಈವರೆಗೆ ನೀಲಿಯಾಗಿಲ್ಲ!

## ನಾಗರಾಜ ವಸ್ತಾರೆ

ಕವಿ, ಕತೆಗಾರ, ಪ್ರಬಂಧಕಾರ, ಆರ್ಕಿಟೆಕ್ಟ್ ನಾಗರಾಜ ವಸ್ತಾರೆ 'ಹಕೂನ ಮಟಾಟ', 'ನಿರವಯವ' ಎಂಬ ಕಥಾಸಂಕಲನಗಳನ್ನು, 'ಮಡಿಲು' ಎಂಬ ನೀಳ್ಗತೆಯನ್ನು ಪ್ರಕಟಿಸಿದ್ದಾರೆ. 'ಹಳೆಮನೆ ಕತೆ', 'ಬಯಲು ಆಲಯ' ಮತ್ತು 'ಪಟ್ಟಣ ಪುರಾಣ' ಅವರ ಅಂಕಣ ಬರಹಗಳ ಪುಸ್ತಕಗಳಾದರೆ, 'ವಸ್ತಾರೆ ಪದ್ಯಗಳು', 'ವಸ್ತಾರೆ ಇನ್ನೂ 75' ಅವರ ಕವಿತೆಗಳ ಸಂಗ್ರಹಗಳಾಗಿವೆ. ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿದ್ದಾರೆ. ವಸ್ತಾರೆಯವರ ಎಂಟು ಪುಸ್ತಕಗಳು ಇತ್ತೀಚೆಗೆ ಪ್ರಕಟವಾಗಿವೆ.